# ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ, ಶಿವಗಂಗೋತ್ರಿ, ದಾವಣಗೆರೆ-577 002.

ದೂರವಾಣಿ ಸಂಖ್ಯೆ: 08192-208420,208104

ದಿನಾಂಕ:12-10-2017

1. Non CBCS (Semester) ಪದ್ಧತಿಯಡಿ 1ನೇ ಹಾಗೂ 2ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು 2017-18ನೇ ಶೈಕ್ಷಣಿಕ ಸಾಲಿನಲ್ಲಿ CBCS ಪದ್ಧತಿಯಲ್ಲಿ 3ನೇ ಸೆಮಿಸ್ಟರ್ ನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ CBCS ಪದ್ಧತಿಯಲ್ಲಿ ಪರೀಕ್ಷೆಗಳನ್ನು ಏರ್ಪಡಿಸಲು ನಿರ್ಣಯಿಸಲಾಯಿತು.ಅಲ್ಲದೆ, 1ನೇ ಹಾಗೂ 2ನೇ ಸೆಮಿಸ್ಟರುಗಳಲ್ಲಿ(Non-CBCS) ಪಡೆದಿರುವ ಅಂಕಗಳನ್ನು ಸಿಬಿಸಿಎಸ್ ನಿಯಮಗಳನುಸಾರ ಗ್ರೇಡಿಂಗ್ ಪದ್ಧತಿಗೆ ಪರಿವರ್ತಿಸಿ, ಗ್ರೇಡ್ ನಮೂದಿಸಲು ತೀರ್ಮಾನಿಸಲಾಯಿತು.
2. Non-CBCS ಪದ್ಧತಿಯಲ್ಲಿ 1ನೇ ಹಾಗೂ 2ನೇ ಸೆಮಿಸ್ಟರುಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಗಳನ್ನು ಪರಿವರ್ತಿಸಿ, ಸಿಬಿಸಿಎಸ್ ಪದ್ಧತಿಯಲ್ಲಿ ಗ್ರೇಡಿಂಗ್ ನೀಡುವ ಬಗ್ಗೆ ವಿಶೇಷ ಶುಲ್ಕ ವಿಧಿಸಲು ನಿರ್ಣಯಿಸಲಾಯಿತು
3. Non CBCS ಪದ್ಧತಿಯ 1ನೇ ಅಥವ 2ನೇ ಸೆಮಿಸ್ಟರುಗಳಲ್ಲಿ ಅನುತ್ತೀರ್ಣರಾದ ವಿಷಯಗಳಲ್ಲಿ 2017-18ನೇ ಸಾಲಿನಲ್ಲಿ ಏರ್ಪಡಿಸಲಾಗುವ ಪರೀಕ್ಷೆಗಳಲ್ಲಿ ಹಳೆಯ ಪಠ್ಯಕ್ರಮದಡಿ(Non-CBCS) ಪರೀಕ್ಷೆಗಳಿಗೆ ಹಾಜರಾಗಿ ಉತ್ತೀರ್ಣರಾಗುವ ಬಗ್ಗೆ ಸೂಚನೆ ನೀಡಬೇಕೆಂದು ಹಾಗೂ ಉತ್ತೀರ್ಣರಾಗದ ವಿದ್ಯಾರ್ಥಿಗಳು ಸಿಬಿಸಿಎಸ್ ಪದ್ಧತಿಯಡಿ ಪ್ರಥಮ ಸೆಮಿಸ್ಟರ್ ಗೆ ಪ್ರವೇಶ ಪಡೆದುಕೊಳ್ಳುವಂತೆ ತಿಳಿಸುವ ಬಗ್ಗೆ ನಿರ್ಣಯಿಸಲಾಯಿತು.
4. Non-CBCS ವಿದ್ಯಾರ್ಥಿಗಳಿಗೆ "Double the Duration" ಅವಧಿಯಲ್ಲಿ ಪ್ರವೇಶಾತಿ ಪಡೆಯಲು ಅವಕಾಶಗಳಿದ್ದರೂ ಸಹ, 2018-19ನೇ ಶೈಕ್ಷಣಿಕ ಸಾಲಿನಿಂದ 3ನೇ ಸೆಮಿಸ್ಟರಿಗೆ ಸಿಬಿಸಿಎಸ್ ಪದ್ಧತಿಯಡಿ ಪ್ರವೇಶಾತಿಗಳನ್ನು ನೀಡದಿರಲು ನಿರ್ಣಯಿಸಲಾಯಿತು.
5. ಪರೀಕ್ಷಾ ಶುಲ್ಕವನ್ನು ರೂ: 500/- ಗಳ ದಂಡ ಶುಲ್ಕದೂಂದಿಗೆ ದಿನಾಂಕ:21-10-2017 ರೊಳಗೆ ಪಾವತಿಸುವ ಬಗ್ಗೆ ಎಲ್ಲಾ ಕಾಲೇಜುಗಳಿಗೆ ಸುತ್ತೋಲೆ ಕಳುಹಿಸಲು ಕುಲಸಚಿವರು(ಪ) ಇವರಿಗೆ ತಿಳಿಸಲಾಯಿತು.
6. Non-CBCS ನಿಂದ **CBCS** ಸ್ಕೀಂನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ವಿಷಯಗಳನ್ನು ಅಧ್ಯಯನ ಮಾಡಲು ವಿಶ್ವವಿದ್ಯಾನಿಲಯದಿಂದ ಶಿಫಾರಸ್ಸು ಮಾಡಿದಲ್ಲಿ, ಅಂತಹ ವಿದ್ಯಾರ್ಥಿಗಳು ಹೆಚ್ಚುವರಿ ವಿಷಯಗಳನ್ನು ಸ್ವಂತ ಜವಾಬ್ದಾರಿಯ ಮೇರೆಗೆ ಅಧ್ಯಯನ ಮಾಡಿ, ಪರೀಕ್ಷೆ ಬರೆಯುವ ಬಗ್ಗೆ ಸೂಚನೆ ನೀಡಬೇಕೆಂದು ನಿರ್ಣಯಿಸಲಾಯಿತು.

ಕುಲಸಚಿವರು.

12/10

ದಾವಣಗೆರೆ ವಿಶ್ವವಿದ್ಯಾನಿಲಯ